# ಹೊಸತು




## ಹಿಮಾಲಯ ಫೇರ್‌ನೆಸ್ ಕ್ರೀಮ್

ಹರ್ಬಲ್ ಉತ್ಪನ್ನಗಳಿಗೆ ಹೆಸರಾದ ಹಿಮಾಲಯ, ಇದೀಗ ನ್ಯಾಚುರಲ್ ಗ್ಲೋ ಫೇರ್‌ನೆಸ್ ಕ್ರೀಮ್ ಒಂದನ್ನು ಹೊಸದಾಗಿ ಬಿಡುಗಡೆ ಮಾಡಿದೆ. ಇದು ವಿಟಮಿನ್ ಇ ಯಿಂದ ಸಮೃದ್ಧವಾಗಿದ್ದು, ತ್ವಚೆಯ ರಕ್ಷಣೆಗೆ ಸಹಕಾರಿ ಎಂದು ಕಂಪೆನಿ ಹೇಳಿದೆ. 50 ಗ್ರಾಂ ಪ್ಯಾಕ್ ಬೆಲೆ 80 ರೂಪಾಯಿ. ಎಲ್ಲ ಪ್ರಮುಖ ಮಳಿಗೆ ಮತ್ತು ಹಿಮಾಲಯ ಔಟ್‌ಲೆಟ್‌ಗಳಲ್ಲಿ ಸಿಗುತ್ತದೆ.




## ಸಿಂಥಾಲ್ ಕಾನ್ಫಿಡೆನ್ಸ್ ಪ್ಲಸ್

ಸ್ನಾನದ ಸಾಬೂನು ಬ್ರಾಂಡ್ ಸಿಂಥಾಲ್, ಯುವಜನರಿಗಾಗಿ ಹೊಸ ಸಿಂಥಾಲ್ ಕಾನ್ಫಿಡೆನ್ಸ್+ `ಸಂಪೂರ್ಣ ಆರೋಗ್ಯದ ಸಾಬೂನು ಎಂದು ಹೇಳಿಕೊಂಡು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ.

ಇದು ಹೊಸ ತಲೆಮಾರಿನವರಿಗಾಗಿ ತಯಾರಾದ ಯುವ ಭಾರತೀಯರ ಸಾಬೂನಾಗಿದ್ದು ಅವರ ಬಯಕೆಗಳು, ಸವಾಲುಗಳು ಎದುರಿಸುವ ಮನೋಭಾವಕ್ಕೆ ಸೂಕ್ತವಾಗಿದೆ. ಸಿಂಥಾಲ್ ಕಾನ್ಫಿಡೆನ್ಸ್+ ಶೇ.99.9ರಷ್ಟು ಕೀಟಾಣುಗಳಿಂದ ರಕ್ಷಣೆ ನೀಡುವ ಅದ್ಭುತ `ಇನ್ಸಾ-ಡಿಯೊ ಸುವಾಸನೆಯ `ಸಂಪೂರ್ಣ ಆರೋಗ್ಯ ಸಾಬೂನು ಆಗಿದ್ದು ಅದ್ಭುತ ಸ್ನಾನದ ಅನುಭವ ನೀಡುತ್ತದೆ ಎಂದು ಕಂಪೆನಿ ಹೇಳಿದೆ.

ಸಿಂಥಾಲ್ ಕಾನ್ಫಿಡೆನ್ಸ್+ ಎಲ್ಲ ಪ್ರಮುಖ ರಿಟೇಲ್ ಮಳಿಗೆಗಳಲ್ಲಿ ಸಿಗುತ್ತದೆ. ಬೆಲೆ 32ರೂ. ವಿವರಕ್ಕೆ: 9888908706




## ಜಾಕ್ಸನ್ ನಿಂದ ಸೌರ ವಿದ್ಯುತ್ ಉತ್ಪನ್ನ

ವಿದ್ಯುತ್ ಪರಿಕರಗಳನ್ನು ಒದಗಿಸುವ ಮುಂಚೂಣಿ ಕಂಪನಿ ಜಾಕ್ಸನ್ ಗ್ರೂಪ್, ಗೃಹ ದೀಪಗಳ ವ್ಯವಸ್ಥೆಗಳು (ಹೆಚ್‌ಎಲ್‌ಎಸ್), ಬೀದಿ ದೀಪ, ಒಳಾಂಗಣ ಆರ್‌ಒ ವ್ಯವಸ್ಥೆ ಹಾಗೂ ಭಾರತದ ನಗರ ಮತ್ತು ಗ್ರಾಮೀಣ ಎರಡೂ ಮಾರುಕಟ್ಟೆಗಳ ಅಗತ್ಯಗಳನ್ನು ಪೂರೈಸುವಂತಹ ಸೌರ ವಿದ್ಯುತ್ ಉತ್ಪನ್ನಗಳನ್ನು ಬಿಡುಗಡೆ ಮಾಡಿದೆ.

ಇದರಲ್ಲಿ ಸೋಲಾರ್ ಹೀಟರ್, ಬಲ್ಬ್, ಫ್ಯಾನ್ ಮುಂತಾದ ಉತ್ಪನ್ನಗಳಿವೆ. ಲಭ್ಯತೆ, ಬೆಲೆ ಮತ್ತಿತರ ಮಾಹಿತಿಗೆ: 91641 64788




## ಗಣೇಶ ಪ್ರೇರಿತ ವಿಲಿಯಂ ಪೆನ್

ಗಣೇಶನಿಂದ ಪ್ರೇರಿತವಾದ ವಿಲಿಯಂ ಪೆನ್ ಕಂಪೆನಿ ಇದೀಗ ಹೊಸ ಮಾದರಿಯ ಲೇಖನಿ ಸಾಮಗ್ರಿಗಳನ್ನು ಬಿಡುಗಡೆ ಮಾಡಿದೆ. ಹಕ್ಕಿಯ ರೆಕ್ಕೆಯನ್ನು ಒಳಗೊಂಡ ಗಣೇಶ ಖಚಿತ ಪೆನ್ ನೋಡಲು ಆಕರ್ಷಕವೂ ಆಗಿದೆ. ಬರವಣಿಗೆಯೂ ಸುಲಲಿತವಾಗಲು ಸಹಕಾರಿಯಾಗಿದೆ ಎಂಬುದು ಕಂಪೆನಿ ವಿವರಣೆ. ಕೆಂಪು, ಕಿತ್ತಳೆ, ನೀಲಿ ಸೇರಿದಂತೆ ಒಟ್ಟು ಆರು ಆಕರ್ಷಕ ಬಣ್ಣಗಳಲ್ಲಿ ಸಿಗುತ್ತದೆ. ಮಾಹಿತಿಗೆ: www.williampenn.net

## ಫ್ಲೋರ್‌ಶೆಮ್ ಲೈಟ್ ಶೂ

ಫ್ಲೋರ್‌ಶೆಮ್ ಇದೀಗ ಅತ್ಯಂತ ಹಗುರವಾಗಿರುವ ಲೆದರ್‌ನಿಂದ ತಯಾರಿಸಿದ ಲೈಟ್ ಶೂಗಳನ್ನು ಬಿಡುಗಡೆ ಮಾಡಿದೆ. ಸ್ಟೈಲಿಷ್ ಹುಡುಗರಿಗೆ ಸೂಕ್ತವಾಗಿದ್ದು, ಬಾಳಿಕೆಯೂ ಚೆನ್ನಾಗಿ ಬರುತ್ತದೆ ಎಂಬುದು ಕಂಪೆನಿ ಮಾತು. ಪ್ರಮುಖ ಮಳಿಗೆಗಳಲ್ಲಿ ಲಭ್ಯ. ವಿವರಕ್ಕೆ: 9820224440



## ಆಕರ್ಷಕ ಸ್ವಿಚ್ ಬೋರ್ಡ್

ಪ್ಯಾನಸೋನಿಕ್ ಇಂಡಿಯಾ ಕಂಪೆನಿ ಇದೀಗ ಆಕರ್ಷಕ ಸ್ವಿಚ್‌ಗಳನ್ನು ಬಿಡುಗಡೆ ಮಾಡಿದೆ. ರೋಮಾ ಹೆಸರಿನ ಇದರಲ್ಲಿ 168 ಮಾದರಿಗಳಿವೆ.

